# ನವಿಲುಗನ್ನಡಿ

- ಏಪ್ರಿಲ್ ಸಂಚಿಕೆ ಹಲವಾರು ವೈವಿಧ್ಯಮಯ ಬರಹಗಳಿಂದ ಗಮನಸೆಳೆಯಿತು. ಸಂಪಾದಕೀಯ 'ನಾಂದಿಪದ' ಸಕಾಲಿಕವಾಗಿದೆ, ವಿಶಿಷ್ಟವಾಗಿದೆ. 'ಆರ್ದ್ರತೆಯಿಲ್ಲದೆ ದೊಡ್ಡ ಸಾಹಿತ್ಯ ಹುಟ್ಟಲ್ಲ' ಲೇಖಕಿ ಕಸ್ತೂರಿ ಬಾಯರಿ ಅವರೊಂದಿಗಿನ ಸಂವಾದ (ಸಂದರ್ಶನ: ರಹಮತ್ ತರೀಕೆರೆ) ಮನಕಲಕಿತು.

**ಬಿ.ಆರ್. ಅಣ್ಣಾಸಾಗರ, ಸೇಡಂ**
**ಎ. ಗುರುಪ್ರಸಾದ್, ಆಲೂರು**

- ಕಸ್ತೂರಿ ಬಾಯರಿ ಅವರ ನೇರ ಮಾತುಗಳು ಇಷ್ಟವಾದವು. 'ಎಷ್ಟೆಲ್ಲಾ ನೋವಿನೊಂದಿಗೆ ಜೀವನ ಒಂದು ಸುಂದರ ಕಾವ್ಯ. ವ್ಯಕ್ತಿ ಮುಖ್ಯವಲ್ಲ, ಬದುಕು ಮುಖ್ಯ' ಎನ್ನುವ ಅವರ ಮಾತು ಸಾರ್ವಕಾಲಿಕ ಸತ್ಯ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಮುಖಪುಟ ಮನಸೂರೆಗೊಂಡಿತು. ಗ್ಯಾಲರಿಯಲ್ಲಿ ಪ್ರಕಟವಾದ ಮಿಂಚುಳ್ಳಿ ಹಕ್ಕಿ ಬಲು ಮೋಹಕವಾಗಿದೆ. ಕವಿತೆಗಳು ಒಂದಕ್ಕಿಂತ ಒಂದು ಚಂದ. ಕತೆ, ವಿಶೇಷ ಬರಹಗಳನ್ನೊಳಗೊಂಡ ಸಂಚಿಕೆ ಸೊಗಸಾಗಿದೆ, ಯುಗಾದಿ ವಿಶೇಷಾಂಕದಂತಿದೆ.

**ನಿರುಕ್ತಾ, ಬೆಂಗಳೂರು**
**ಗಣೇಶ ಟಿ.ಸಿ., ಬೆಂಗಳೂರು**

- ಡಿ.ಆರ್. ನಾಗರಾಜರ ಕುರಿತ ನಟರಾಜ ಹುಳಿಯಾರ್ ಲೇಖನ ತುಂಬ ಚೆನ್ನಾಗಿದೆ. ನಿಜ, ನಾಗರಾಜರ ವಿಮರ್ಶಾ ಒಳನೋಟಗಳು ಇಂದಿಗೂ ಹೊಸಬೆಳಕು ನೀಡುತ್ತಿವೆ. ತರುಣ ವಿಮರ್ಶಕರು ಇಂತಹ ಲೇಖನಗಳಿಂದ ತುಂಬ ಕಲಿಯಬಹುದು.

**ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**




- ಕವಿ ಚೆನ್ನವೀರ ಕಣವಿ ಅವರ ಕುರಿತು ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಬರೆದ ಅಕ್ಷರ ನಮನ 'ಆತಂಕ–ತಲ್ಲಣಗಳ ನಡುವೆ ಭರವಸೆಯ ಆಶಾವಾದ' ಆಪ್ತವಾಗಿ ಮೂಡಿಬಂದಿದೆ.

**ಆರ್. ಮಣಿ, ಮೈಸೂರು**

- ಗುರುಪ್ರಸಾದ್ ಕಂಟಲಗೆರೆ ಅವರ ಕತೆ 'ಬೆಂಕಿಪುರ ಕಾಲೋನಿ' ಚೆನ್ನಾಗಿ ಮೂಡಿಬಂದಿದೆ. ಎಂ.ಟಿ. ವಾಸುದೇವನ್ ನಾಯರ್ ಅವರ ಕತೆ 'ಭಾಗ್ಯ' (ಕನ್ನಡಕ್ಕೆ: ಮೋಹನ ಕುಂಟಾರ್) ವಿಭಿನ್ನವಾದ ಮನನೀಯ ಕತೆ.

**ಭಾಗ್ಯಾ ಅರವಿಂದ್, ಗುಳೇದಗುಡ್ಡ**
**ಸಾವಿತ್ರಿ ಶ್ಯಾನಭಾಗ್, ಕುಂದಾಪುರ**

- ಮಧುರಾ ಕರ್ಣಮ್ ಅವರ 'ದಡ' ಕತೆ 70–80ರ ದಶಕದ್ದೆನಿಸಿದರೂ ಅದರ ಅಂತ್ಯ ಆಧುನಿಕ ಮನೋಭೂಮಿಕೆಯನ್ನು ಸೂಚಿಸುತ್ತದೆ. ಸಂಪ್ರದಾಯದ ಕಟ್ಟುಪಾಡುಗಳನ್ನು ದಾಟಿ ಮುಂದೆ ಹೆಜ್ಜೆಯೂರುವ ಕತೆಯ ನಾಯಕಿ ಇಷ್ಟವಾದಳು.

**ಸೇತುರಾವ್ ಕುಲಕರ್ಣಿ, ಬೆಂಗಳೂರು**
**ಸುಧೀರ್ ಪೊಸಿತ್ಲು, ಬೆಂಗಳೂರು**